


**ರಾಧೇಶ ತೋಳ್ಪಾಡಿ**

ಕಲೆ: ಸಂತೋಷ್ ಸಸಿಹಿತ್ಲು


# ಕಂಸನ ಶಾಲೆ

ಕಂಸ ಕಂಸ ಕಂಸ ಕಂಸ
ಕಂಸನ ಶಾಲೆ ಇದು
ಸಂಶಯವಿಲ್ಲ ಕಂಸನ ವಂಶದ
ಕಟುಕರ ಕೂಟವಿದು!

ಹುಟ್ಟುವ ಮೊದಲೇ ಫೀಸನು ಕಟ್ಟಿ
ಜೈಲನು ಕಾದಿರಿಸಿ!
ಹೊಟ್ಟೆಯ ಮಗುವಿಗೆ ಇಂಗ್ಲಿಷ್ ಕಲಿಸಿ
ಕುಲಾವಿ ತೆಗೆದಿರಿಸಿ

ಬೀಳದೆ ಇರಲಿ ಕನ್ನಡ ಪದಗಳು
ಒಳಗಿನ ಮಗು ಕಿವಿಗೆ
ನರ್ಸರಿ ರೈಮ್ಸೇ ಜೋಗುಳವಾಗಲಿ
ಗರ್ಭಿಣಿ, ಪಾಪುವಿಗೆ

ಜಂಗಮವಾಣಿ, ಟೀವೀನಲ್ಲೂ
ಮೊಳಗಲಿ ಇಂಗ್ಲೀಷೇ
ತಪ್ಪಾದರೂ ಸರಿ ಮಾತಾಡ್ತಾ ಇರಿ
ಠುಸ್ ಪುಸ್ ಕಂಗ್ಲೀಷೇ

ಕಂಸನ ಮುಷ್ಟಿಯ ಗ್ರಿಪ್ಪೇ ಗ್ರಿಪ್ಪು
ಬೀಳೋ ಭಯವಿಲ್ಲ!
ವಂಶದ ಎಲ್ಲರೂ ಸ್ಟ್ರಿಕ್ಟೇ ಸ್ಟ್ರಿಕ್ಟು
ಸಂಶಯ ಬೇಕಿಲ್ಲ!

ಕಂಸನ ಇದಿರಿಗೆ ಯಾರೂ ಇಲ್ಲ
ಧ್ವಂಸ ವಿಧ್ವಂಸ!
ಕನ್ನಡ ಶಾಲೆ ಮನೆ ಮಠ ಗಲ್ಲಿಗೆ
ಎಲ್ರೀ ನಮ್ ಸಂಸ?

ಊರೂರೆಲ್ಲ ಮಥುರಾ ನಗರಿಯೇ
ಸೆರೆಯಲಿ ಅಪ್ಪಮ್ಮ!
ಬಿಡಿಸಲು ಬರುವರೆ ಆ ಬಲರಾಮ
ಕೃಷ್ಣ ದುರ್ಗಾಂಬಾ?

